1	2	3	4
20)	ಉತ್ತರ ಕನ್ನಡ	1.84	3.55
21)	ಬಾಗಲಕೋಟೆ	5.34	3.96
22)	ಚಾಮರಾಜನಗರ	1.97	2.31
23)	ದಾವಣಗೆರೆ	4.03	4.30
24)	ಗದಗ	2.47	2.33
25)	ಹಾವೇರಿ	4.68	3.45
26)	ಕೊಪ್ಪಳ	2.49	2.36
27)	ಉಡುಪಿ	3.48	2.66
	ಒಟ್ಟು	124.80	126.13

ಸಕ್ಕರೆ ಕಾರ್ಖಾನೆಗಳು ರೈತರಿಗೆ ನೀಡಬೇಕಾದ ಹಣದ ಪಾವತಿ.

1212(1196) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) :— ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮಂಡ್ಯ ಜಿಲ್ಲೆಯಲ್ಲಿರುವ ಸಕ್ಕರೆ ಕಾರ್ಖಾನೆಗಳಲ್ಲಿ ಈ ವರ್ಷ ಅರೆದಿರುವ ಕಬ್ಬಿನ ಪ್ರಮಾಣವೆಷ್ಟು? (ಪ್ರತ್ಯೇಕ ವಿವರಗಳನ್ನು ನೀಡುವುದು)

ಆ) ಕಬ್ಬಿನ ಸರಬರಾಜು ಬಾಬ್ತು ರೈತರಿಗೆ ನೀಡಲಾಗಿರುವ ಹಣವೆಷ್ಟು? (ವಿವರಗಳನ್ನು ಪ್ರತ್ಯೇಕವಾಗಿ ನೀಡುವುದು)

ಇ) ರೈತರಿಗೆ ಬಾಕಿ ನೀಡಬೇಕಾದಲ್ಲಿ, ನೀಡಬೇಕಾದ ಹಣದ ಮೊತ್ತವೆಷ್ಟು? (ಪ್ರತ್ಯೇಕ ವಿವರಗಳನ್ನು ನೀಡುವುದು)

ಈ) ರೈತರಿಗೆ ಯಾವಾಗ ಬಾಕಿ ಹಣ ನೀಡಲಾಗುವುದು?

ಶ್ರೀ ಎ. ಕೃಷ್ಣಪ್ಪ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :—

ಅ) ಮಂಡ್ಯ ಜಿಲ್ಲೆಯಲ್ಲಿ 4 ಸಕ್ಕರೆ ಕಾರ್ಖಾನೆಗಳು ಕಾರ್ಯನಿರ್ವಹಿಸುತ್ತಿದ್ದು, ಅವುಗಳಲ್ಲಿ ಒಂದು ಸರ್ಕಾರಿ ವಲಯದಲ್ಲೂ, ಒಂದು ಸಹಕಾರಿ ವಲಯದಲ್ಲೂ ಉಳಿದವುಗಳು ಖಾಸಗಿ ವಲಯದಲ್ಲಿರುತ್ತವೆ.

2001-02ರ ಹಂಗಾಮಿನಲ್ಲಿ ದಿನಾಂಕ: 31-12-01ರ ಅಂತ್ಯಕ್ಕೆ ಕಬ್ಬು ಅರೆದಿರುವ ಪ್ರಮಾಣ:

(ಮೆ. ಟನ್‌ಗಳಲ್ಲಿ)

1) ಮೈಸೂರು ಸಕ್ಕರೆ ಕಾರ್ಖಾನೆ (ನ) ಮಂಡ್ಯ	3,82,415
2) ಪಾಂಡವಪುರ ಸಸಕಾ (ನ) ಪಾಂಡವಪುರ	1,55,721
3) ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆ, ಕೆ.ಎಂ. ದೊಡ್ಡಿ	2,75,060
4) ಐ.ಸಿ.ಎಲ್. ಶುಗರ್ಸ್ ಕೆ.ಆರ್. ಪೇಟೆ	2,23,578

ಅ) ಈ ನಾಲ್ಕು ಸಕ್ಕರೆ ಕಾರ್ಖಾನೆಗಳು ರೈತರಿಗೆ ಪಾವತಿಸಿದ ಮತ್ತು ಪಾವತಿಸಬೇಕಾದ ಕಬ್ಬು ಬೆಲೆ ಬಾಕಿ ವಿವರ ಈ ಕೆಳಕಂಡಂತಿದೆ (ದಿನಾಂಕ31-12-01 ರಲ್ಲಿದ್ದಂತೆ)

(ಲಕ್ಷ ರೂ.ಗಳಲ್ಲಿ)

ಕಾರ್ಖಾನೆಯ ಹೆಸರು	2000-01 ಮತ್ತು ಹಿಂದಿನ ವರ್ಷಗಳ ಬಾಕಿ	2001-02ನೇ ಸಾಲಿನ ಹಂಗಾಮಿನ ಬಾಕಿ		ಚಾಲ್ತಿ ಬಾಕಿ	ಒಟ್ಟು ಬಾಕಿ
		ಪಾವತಿ-ಸಬೇಕಾ-ದುದು	ಪಾವತಿ-ಸಿರುವುದು		
1) ಮೈಸೂರು ಸಕ್ಕರೆ ಕಂ.	-	4524	2384	2140	2140
2) ಪಾಂಡವಪುರ ಸ.ಸ.ಕಾ	118	1285	460	825	943
3) ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆ,	-	2008	1223	785	785
4) ಐ.ಸಿ.ಎಲ್. ಸಕ್ಕರೆ ಕಾರ್ಖಾನೆ,	-	3170	2118	1052	1052
ಒಟ್ಟು	118	12489	7687	4802	4920

ಆ) ನೀಡಬೇಕಾದ ಹಣದ ಒಟ್ಟು ಮೊತ್ತ ರೂ. 4920.00 ಲಕ್ಷ ವಿವರಗಳನ್ನು ಮೇಲಿನ ಕ್ರಮ ಸಂಖ್ಯೆ 2ರ ("ಅ") ಮುಂದೆ ನೀಡಲಾಗಿದೆ.

ಈ) ಮೇಲೆ ಕ್ರ.ಸಂ.2ರ ("ಬ") ಮುಂದೆ ನಮೂದಿಸಿರುವ ಮಾಹಿತಿಯನ್ನು ಗಮನಿಸಲಾಗಿ, ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆ (ನ), ಒಂದನ್ನು ಹೊರತುಪಡಿಸಿ, ಉಳಿದ 3 ಕಾರ್ಖಾನೆಗಳ ಬಾಕಿಯು ಫ್ರಸಕ್ತ ಕಬ್ಬು ಸುರಿಸುವ ಹಂಗಾಮಿನ ಬಾಕಿ ಮೊತ್ತವಾಗಿದ್ದು, ಅದು ರನ್ನಿಂಗ್ ಬಿಲ್ಲಿನ ಭಾಗವಾಗಿರುತ್ತದೆ. ಈ ಮೂರು ಕಾರ್ಖಾನೆಗಳಿಗೆ ಸಂಬಂಧಿಸಿದಂತೆ ಹಿಂದಿನ ಸಾಲಿನ ಬಾಕಿ ಇರುವುದಿಲ್ಲ. ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆಯು ಹಿಂದಿನ ವರ್ಷದ ಅಂದರೆ 2000-01ರ ಸಾಲಿನ ರೂ. 118.00

ಲಕ್ಷ ಬಾಕಿ ಮತ್ತು ಭೂಸ್ವಾಧೀನ ಸಾಲಿನ ರೂ. 825.00 ಲಕ್ಷ ಬಾಕಿ ನೀಡಬೇಕಾಗಿದೆ. ಇದಕ್ಕೆ ಕಾರಣ ಕಾರ್ಖಾನೆಯು ಹಣಕಾಸಿನ ಮುಗ್ಗಟ್ಟು ಅಗಿರುತ್ತದೆ ಮತ್ತು ಈ ವರ್ಷ ಕಬ್ಬಿನ ನುರಿಸುವಿಕೆಯು ಸಹ ಕೇವಲ 1.56 ಲಕ್ಷ ಟನ್‌ಗಳಷ್ಟು ಮಾತ್ರ ಆಗಿದೆ. ಕಾರ್ಖಾನೆಯಂ ಕಬ್ಬಿನ ಬೆಲೆ ಬಾಕಿ ಬೀಯವಳಿಗಾಗಿ ಸರ್ಕಾರದಿಂದ ರೂ. 10.00 ಕೋಟಿ (ರೂಪಾಯಿಂ ಹತ್ತು ಕೋಟಿ) ಮೃದು ಸಾಲ ಕೋರಿದ್ದು, ಕಾರ್ಖಾನೆಯ ಪ್ರಸ್ತಾವನೆಯನ್ನು ವಿವರವಾದ ವರದಿಯೊಂದಿಗೆ ಸರ್ಕಾರದ ಸಹಮತಿ ಅಭಿಪ್ರಾಯಕ್ಕೆ ಸಲ್ಲಿಸಲಾಗಿದ್ದು, ಸದರಿ ಪ್ರಸ್ತಾವನೆಯಂ ಸರ್ಕಾರದ ಪರಿಶೀಲನೆಯಲ್ಲಿದೆ.

ರಾಜ್ಯದಲ್ಲಿ ಅಂತರ್ಜಲ ಮಟ್ಟ ಹೆಚ್ಚಿಸುವುದು.

1213(1197) ಶ್ರೀ ಆರ್.ಅಶೋಕ್ ಎಂ.ಎಸ್. (ಮಂಡ್ಯ) :— ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ರಾಜ್ಯದಲ್ಲಿನ 'ಅಂತರ್ಜಲ' ಮಟ್ಟ ಕುಸಿತದಿಂದಾಗಿ, ಗ್ರಾಮೀಣ ಪ್ರದೇಶದಲ್ಲಿ ನೀರಿನ ಸಮಸ್ಯೆಯುಂಟಾಗುತ್ತಿರುವ ಬಗ್ಗೆ ಸರ್ಕಾರ ಪರಿಹಾರ ಮಾರ್ಗೋಪಾಯ-ಗಳನ್ನೇನಾದರೂ ಆಲೋಚಿಸಿದೆಯೇ;

2. ಆಗಿದ್ದರೆ, ಈವರೆಗೆ ಯಾವಕ್ರಮ ಕೈಗೊಂಡಿದೆ;

3. 'ರೇನ್ ಹಾರ್ವೆಸ್ಟಿಂಗ್' ತಂತ್ರಜ್ಞಾನವನ್ನು ಅದರ ಸೌಲಭ್ಯವನ್ನು ಪಡೆದುಕೊಳ್ಳಲಾಗಿದೆಯೇ?

4. ಈ ಮಂಡಲಿನ ತಂತ್ರಜ್ಞಾನ ಯಾವ ರೀತಿ ಬಳಸಲ್ಪಡುತ್ತಿದೆ?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು) :—

1. ಹೌದು.

2. ರಾಜ್ಯದ ವಿವಿಧ ಭಾಗಗಳಲ್ಲಿ ಅಂತರ್ಜಲ ಮಟ್ಟವನ್ನು ಹೆಚ್ಚಿಸಲು ಅಂತರ್ಜಲ ಕೃತಕ ಮರು ಪೂರ್ಣಿಕೆ ರಚನೆಗಳನ್ನು ನಿರ್ಮಾಣ ಮಾಡಲಾಗುತ್ತಿದೆ.

3. ಹೌದು.

4. ನಗರ ಮತ್ತು ಪಟ್ಟಣ ಪ್ರದೇಶಗಳ ಗುಂಪು ಮನೆ ಯೋಜನೆಗಳು ಹಾಗೂ ಬಹು ಮಹಡಿಕಟ್ಟಡಗಳಲ್ಲಿ, ಈ ತಂತ್ರಜ್ಞಾನದ ಬಳಕೆಯು ಈಗ ಸಾರ್ವಜನಿಕ ನೀರು ಪೂರ್ಣಿಕೆ ವ್ಯವಸ್ಥೆಗೆ ಪೂರಕವಾಗಿ ಬಳಸಿಕೊಳ್ಳಲು ಅನುಷ್ಠಾನಗೊಳಿಸಲಾಗಿದೆ.